# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪಿ.ಬಿ.ರಾಷ್ಟ್ರೀಯ ಹೆದ್ದಾರಿ-4, ಭೂತರಾಮನಹಟ್ಟಿ, ಬೆಳಗಾವಿ-591156

# RANI CHANNAMMA UNIVERSITY

Vidyasangama, National Highway-04, Belagavi-591156

**ಕುಲಸಚಿವರ ಕಾರ್ಯಾಲಯ**

ಫೋನ್ ನಂ:0831-2565242/203 Website:www.rcub.ac.in

ಫ್ಯಾಕ್ಸ್ :0831-2565240 E-mail : rcuregistrar@gmail.com


ಸಂಖ್ಯೆ:ರಾಚವಿ/ಬೆಳಗಾವಿ/ಕುಸಕಾ/2020-21/3312 ದಿನಾಂಕ: 23-11-2020

## -: ಟೆಂಡರ ಅಧಿಸೂಚನೆ (ಇ-ಪ್ರೊಕ್ಯೂರಮೆಂಟ್‌ನಲ್ಲಿ):-

ಈ ಕೆಳಕಂಡ ಸೂಚಿಪಟ್ಟಿಯಲ್ಲಿ ವಿವರಿಸಿದ 5 ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನ್ವಯ ಈ ಕೆಳಗೆ ಸಹಿ ಮಾಡಿದವರಿಂದ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯ ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರಗಳನ್ನು **ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1&2 ಅಡಿಯಲ್ಲಿ** ಅರ್ಹ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವಲ್ಲಿ ತಮಗಿರುವ ಸಾಮರ್ಥ್ಯದ ಕುರಿತು (ಗುತ್ತಿಗೆದಾರರಿಗೆ ಮಾರ್ಗಸೂಚಿ ಕ್ಲಾಜ-3 ಮತ್ತು 6 ರಲ್ಲಿ ವಿವರಿಸಿದಂತೆ) ವಿವರಗಳನ್ನು ಸಲ್ಲಿಸುವದು. ಗುತ್ತಿಗೆದಾರರು ಮಾರ್ಗಸೂಚಿ ಕ್ಲಾಜ-3 ರಲ್ಲಿ ತಿಳಿಸಿರುವಂತೆ ನಿರ್ಣಾಯಕ ಸೂತ್ರದಲ್ಲಿ ನಮೂದಿಸಿದಂತೆ ಗುತ್ತಿಗೆಯನ್ನು ವಹಿಸಿಕೊಡಲು ಬೇಕಾಗುವ ಕನಿಷ್ಠ ಅರ್ಹತೆಯನ್ನು ಹೊಂದಿದವರಾಗಿರಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಟ್ಟಡ ವಿಭಾಗದ ಕಚೇರಿಯಲ್ಲಿ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

**ಭಾಗ-1 ಈ ಅಧಿಸೂಚನೆಯ ಕಾಮಗಾರಿಗಳಿಗೆ ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.**

| | |
|---|---|
| 1) ಟೆಂಡರ್ ಪ್ರಕಟಣೆ ನೀಡುವ ದಿನಾಂಕ: | 23-11-2020 ಸಂಜೆ 5.00 ಗಂಟೆಯ ನಂತರ |
| 2) ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: | 23-12-2020 ಸಂಜೆ 5.00 ಗಂಟೆಯವರೆಗೆ |
| 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: | 26-12-2020 ಸಂಜೆ 5.00 ಗಂಟೆಯ ನಂತರ |
| 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: | 31-12-2020 ಸಂಜೆ 5.00 ಗಂಟೆಯ ನಂತರ |

## -: ಸೂಚಿ ಪಟ್ಟಿ :-

| ಅ. ನಂ | ಕಾಮಗಾರಿಯ ಹೆಸರು | ಟೆಂಡರಗಿಟ್ಟ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಹಣ ರೂ.ಗಳಲ್ಲಿ | ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ | ಗುತ್ತಿಗರದಾರರ ಕನಿಷ್ಠ ದರ್ಜೆ | ಮೀಸಲಾತಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | Providing Setup Chemistry Laboratory in 1st Grade Sangolli Rayanna Constituent College Belagavi | 28.85 | 72,500/- | 3 ತಿಂಗಳು | 3ನೇ ದರ್ಜೆ ಮೇಲ್ಪಟ್ಟು | ಸಾಮಾನ್ಯ |
| 2 | Providing Setup Physics Laboratory in 1st Grade Sangolli Rayanna Consstituent College Belagavi | 18.96 | 47,500/- | 3 ತಿಂಗಳು | 3ನೇ ದರ್ಜೆ ಮೇಲ್ಪಟ್ಟು | ಸಾಮಾನ್ಯ |
| 3 | Providing Principal Chember in 1st Grade Sangolli Rayanna Consstituent College Belagavi | 8.30 | 21,000/- | 2 ತಿಂಗಳು | 3ನೇ ದರ್ಜೆ ಮೇಲ್ಪಟ್ಟು | ಸಾಮಾನ್ಯ |
| 4 | Providing False Celling in 1st Grade Sangolli Rayanna Consstituent College Belagavi (SC Category Only) | 4.47 | 6,000/- | 2 ತಿಂಗಳು | 4ನೇ ದರ್ಜೆ ಮೇಲ್ಪಟ್ಟು | ಎಸ್.ಸಿ |

| ಅ. ನಂ | ಕಾಮಗಾರಿಯ ಹೆಸರು | ಟೆಂಡರಗಿಟ್ಟ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಹಣ ರೂ.ಗಳಲ್ಲಿ | ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ | ಗುತ್ತಿಗರದಾರರ ಕನಿಷ್ಠ ದರ್ಜೆ | ಮೀಸಲಾತಿ |
|---|---|---|---|---|---|---|
| 5 | Providing and fixing High mast lamp infront of Administrative building and Main Building premises at Rani Channamma University campus at Belagavi. | 8.47 | 21,500/– | 2 ತಿಂಗಳು | 3ನೇ ದರ್ಜೆ ಮೇಲ್ಪಟ್ಟು | ಸಾಮಾನ್ಯ |

ನಿಬಂಧನೆಗಳು:–

**Note _ The rates quoted, whether specified or not, in the tender as per sanctioned estimate are inclusive of all lead and lifts and all other charges to complete the work successfully**

1. ಗುತ್ತಿಗೆದಾರರು Standard tender document K/W -1&2 ನಿಬಂಧನೆಗಳ ಅನುಸಾರವಾಗಿ ಟೆಂಡರನೊಂದಿಗೆ ದಾಖಲೆಗಳನ್ನು pdf ಅಥವಾ file ಗಳಲ್ಲಿ ಸಲ್ಲಿಸತಕ್ಕದ್ದು ಮತ್ತು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೇ ರದ್ದುಗೊಳಿಸುವ ಅಧಿಕಾರ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಗಿದೆ. ಗುತ್ತಿಗೆದಾರರು ತಮ್ಮ ನಿಖರವಾದ ಅಂಚೆ ವಿಳಾಸ ಮತ್ತು ಪೋನ್ ನಂಬರ್ ಟೆಂಡರನೊಂದಿಗೆ ಸಲ್ಲಿಸತಕ್ಕದ್ದು.
2. ಮೇಲಿನ ಕಾಮಗಾರಿಗಳಿಗೆ e procurement portal – www.eproc.karnataka.gov.in ಮುಖಾಂತರ ಮಾತ್ರ ಭಾಗವಹಿಸಬೇಕಾಗುತ್ತದೆ.
3. ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಟೆಂಡರ ಸ್ವೀಕರಿಸುವದನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ.
4. ಯಾವುದೇ ಕಾರಣಕ್ಕೂ ಅರ್ಜಿಯ ಮೊತ್ತವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಯಿಸುವಂತಿಲ್ಲ.
5. ಅಪೂರ್ಣ ಟೆಂಡರಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
6. ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳನ್ನು ಗುತ್ತಿಗೆದಾರರು ಖರೀದಿಸಿ ಇವುಗಳ ಗುಣಮಟ್ಟದ ಕುರಿತು ಪಿ.ಆರ್.ಇ.ಡಿ.ಲ್ಯಾಬ್‌ದಿಂದ ಸ್ವಂತ ಖರ್ಚಿನಲ್ಲಿ ತಪಾತಿಸಿ ಆ ಕುರಿತು ವರದಿ ಪಡೆದು ಪೂರೈಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.
7. ಸದರಿ ಟೆಂಡರನಲ್ಲಿಯ ಕಾಮಗಾರಿಗಳು, ಗುತ್ತಿಗೆದಾರರು ಅವರ ದಾಖಲೆಗಳು, ದಸ್ತಾವೇಜುಗಳು ಇತ್ಯಾದಿ ಕುರಿತು ತಕರಾರು ಆರೋಪಗಳು, ಅಕ್ಷೇಪಣೆಗಳು ಮುಂತಾದವುಗಳನ್ನು ಟೆಂಡರ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ನೇರವಾಗಿ ಕುಲಸಚಿವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇವರಿಗೆ ಸಲ್ಲಿಸತಕ್ಕದ್ದು (ಟಪಾಲಿನಲ್ಲಿ ಕೊಡತಕ್ಕದ್ದು) ನಂತರ ಬಂದ ಅಕ್ಷೇಪಣೆಗಳನ್ನು ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.
8. ಗುತ್ತಿಗೆದಾರರಿಗೆ ಜಿ. ಎಸ್. ಟಿ. ಶುಂಕವನ್ನು ಪ್ರತ್ಯೇಕವಾಗಿ ಭರಿಸಲಾಗುವುದು.
9. ಗುತ್ತಿಗೆದಾರರು ತಮ್ಮ ದಾಖಲೆಗಳನ್ನು pdf ಅಥವಾ jpeg ಪೈಲ್‌ಗಳಲ್ಲಿ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡತಕ್ಕದ್ದು. ಇತರೆ ರೂಪಗಳಲ್ಲಿ ಪೈಲ್‌ಗಳನ್ನು ಪರಿಗಣಿಸಲಾಗುವುದಿಲ್ಲ.
10. ಗುತ್ತಿಗೆದಾರರು ಕಡ್ಡಾಯವಾಗಿ KPWD ಇಲಾಖೆಯಲ್ಲಿ ನೊಂದಾಯಿಸಿದ (ಲೈಸೆನ್ಸ್) ದಾಖಲಾತಿಯನ್ನು ಹಾಗೂ ಪಾನ್ ಸಂಖ್ಯೆ ಮತ್ತು ಜಿ.ಎಸ್.ಟಿ ಸಂಖ್ಯೆ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು, ಇಲ್ಲವಾದಲ್ಲಿ ಅಂತಹ ಗುತ್ತಿಗೆದಾರರನ್ನು ಅನರ್ಹಗೊಳಿಸಲಾಗುವುದು.
11. ನಿಬಂಧನೆಯುಕ್ತ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
12. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿರುವ ಕಾಮಗಾರಿಗಳಿಗೆ ಇತರೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದರೂ ಇವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರುಗಳು ಜಾತಿ ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಅಂತಹ ಗುತ್ತಿಗೆದಾರರನ್ನು ಅನರ್ಹಗೊಳಿಸಲಾಗುವುದು. ಹಾಗೂ ಕರ್ನಾಟಕ ರಾಜ್ಯದಲ್ಲಿ ಕನಿಷ್ಟ 10 ವರ್ಷಗಳ ಕಾಲ ವಾಸವಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಟೆಂಡರ್‌ನೊಂದಿಗೆ ಅಪ್‌ಲೋಡ್ ಮಾಡುವುದು ಸಹ ಕಡ್ಡಾಯವಾಗಿರುತ್ತದೆ.
13. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿರುವ ಕಾಮಗಾರಿಗಳಿಗೆ ಸದರಿ ಜಾತಿಯ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದಿದ್ದ ಪಕ್ಷದಲ್ಲಿ 2ನೇ ಕರೆಯ ನಂತರ ಸಾಮಾನ್ಯ ವರ್ಗದವರು ಭಾಗವಹಿಸಬಹುದಾಗಿರುತ್ತದೆ.
14. ಗುತ್ತಿಗೆದಾರರು ಜಂಟಿಯಾಗಿ (ಇನ್ನೊರ್ವ ಗುತ್ತಿಗೆದಾರರೊಂದಿಗೆ) ಭಾಗವಹಿಸಲು ಅವಕಾಶವಿರುವುದಿಲ್ಲ.
15. ಗುತ್ತಿಗೆದಾರರು ಯಾವುದೇ ಕಾನೂನು ಬಾಹಿರ ಚಟುವಟಿಕೆ ಅಥವಾ ಭ್ರಷ್ಟ ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಸರ್ಕಾರದಿಂದ ಘೋಷಿಸಲ್ಪಟ್ಟಿರಬಾರದು.
16. ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಯಾವುದೇ ಹಾನಿ ಸಂಭವಿಸಿದ್ದಲ್ಲಿ ವೆಚ್ಚವನ್ನು ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.
17. ಮೇಲ್ಕಂಡ ಕಾಮಗಾರಿಗಳಲ್ಲಿ ಯಾವುದೇ ಸೇರ್ಪಡೆ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.
18. ಸರ್ಕಾರದ ಆದೇಶ ಸಂಖ್ಯೆ: ಎಲ್‌ಡಿ/300/ಎಲ್‌ಇಟಿ/2006 ದಿನಾಂಕ:18–1–2007 ರಂತೆ ಕಾರ್ಮಿಕ ಕಲ್ಯಾಣ ನಿಧಿಗೆ ಬಿಲ್ಲುಗಳ ಮೊತ್ತದ ಶೇ.1ರಷ್ಟನ್ನು ಕಡಿತಗೊಳಿಸಲಾಗುವುದು.
19. ಕಾಮಗಾರಿಗೆ ಬೇಕಾಗುವ ನಿರ್ಮಾಣ ಸಾಮಗ್ರಿಗಳನ್ನು ಹಾಗೂ ಇತರೆ ಉಪಕರಣಗಳನ್ನು ಗುತ್ತಿಗೆದಾರರೆ ಸರಬರಾಜು ಮಾಡಿಕೊಳ್ಳಬೇಕು. ಸದರಿ ಸಾಮಗ್ರಿಗಳು ಐ.ಎಸ್.ಐ. ತಾಂತ್ರಿಕ ಗುಣಮಟ್ಟ ಹೊಂದಿರಬೇಕು. ಇವುಗಳನ್ನು ಸಕ್ಷಮ ಪ್ರಾಧಿಕಾರಿ ಸಂಸ್ಥೆಯಿಂದ ಗುತ್ತಿಗೆದಾರರ ಸ್ವಂತ ವೆಚ್ಚದಲ್ಲಿ ಗುಣ ನಿಯಂತ್ರಣ ಪರೀಕ್ಷಾ ವರದಿಯನ್ನು ಸಲ್ಲಿಸಬೇಕು.

**20.** ಇಲಾಖಾ ಸೂಚನೆಯಂತೆ ಕಾಮಗಾರಿಗೆ ಉಪಯೋಗಿಸುವ ನಿರ್ಮಾಣ ಸಾಮಗ್ರಿಗಳು ಮತ್ತು ಕಾಂಕ್ರೀಟ್ ಕ್ಯೂಬ್‌ಗಳ ಪರೀಕ್ಷಾ ಫಲಿತಾಂಶಗಳ ವರದಿಯನ್ನು ಗುತ್ತಿಗೆದಾರರು ಸ್ವಂತ ವೆಚ್ಚದಲ್ಲಿ ಪಡೆಯುವುದು.

**21.** ಈ ಯೋಜನೆಯಡಿ ನಿರ್ಮಿಸುವ ಕಾಮಗಾರಿಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು ಹಾಗೂ ಕಾಮಗಾರಿ ಪೂರ್ಣಗೊಂಡನಂತರ 1 ವರ್ಷ ಕಾಮಗಾರಿ ನಿರ್ವಹಣೆ ಅವಧಿಯನ್ನು ನಿಗದಿಪಡಿಸಲಾಗಿದೆ. ಸದರಿ ಕಾಮಗಾರಿಯ ದುರಸ್ತಿ ನಿರ್ವಹಣೆ ಅವಧಿಯಲ್ಲಿ ಸಂಭವಿಸಿದ್ದಲ್ಲಿ ಗುತ್ತಿಗೆದಾರರೆ ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿ ನಿರ್ವಹಣೆ ಮಾಡತಕ್ಕದ್ದು. ಈ 1 ವರ್ಷದವರೆಗೆ ಗುತ್ತಿಗೆದಾರರ ಭದ್ರತಾ ಠೇವಣಿಯನ್ನು ಹಿಂದಿರುಗಿಸುವುದಿಲ್ಲ.

**22.** ನಿಗಧಿಪಡಿಸಿರುವ ದಿನಾಂಕಗಳಂದು ಸರ್ಕಾರಿ ರಜಾ ದಿನಗಳಾದರೆ ಮುಂದಿನ ದಿನವನ್ನು ಪರಿಗಣಿಸಲಾಗುವುದು.

**23.** ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಮಾಡಿದಲ್ಲಿ ಸದರಿ ಮಾಹಿತಿಯನ್ನು ಇ–ಪೋರ್ಟಲ್ ಮುಖಾಂತರ ಮಾತ್ರ ಪ್ರಕಟಿಸಲಾಗುವುದು.

**24.** ಟೆಂಡರ್ ಸಲ್ಲಿಸುವ ನಿಗಧಿತ ಕೊನೆಯ ಕ್ಷಣಗಳಲ್ಲಿ ಅಂತರ್ಜಾಲದಿಂದ ಆಗಬಹುದಾದ ತೊಂದರೆಗಳಿಗೆ ಈ ಇಲಾಖೆಯು ಜವಾಬ್ದಾರರಲ್ಲ.

**25.** ರಾಜಧನವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಕಾಮಗಾರಿಗಳ ನಿರ್ಮಾಣ ಸಾಮಗ್ರಿಗಳ ಮೇಲೆ ಕಟಾವಣೆ ಮಾಡಲಾಗುತ್ತದೆ.

**26.** ಕಾಮಗಾರಿ ನಿರ್ವಹಿಸುವಾಗ ಉಂಟಾಗುವಂತಹ ಯಾವುದೇ ತಕರಾರುಗಳನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಬಗೆಹರಿಸಿಕೊಳ್ಳಬೇಕಾಗಿರುತ್ತದೆ.

**27.** ಕಾಮಗಾರಿಯ ಸ್ಥಳದ ಭೇಟಿಯ ಪತ್ರವನ್ನು ಕಡ್ಡಾಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಟೆಂಡರ ಸಲ್ಲಿಸುವುದು.

ಸಹಿ/–

**ಕುಲಸಚಿವರು**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

**ಪ್ರತಿ ಮಾಹಿತಿಗಾಗಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಟ್ಟಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.